**ದಿನಾಂಕಃ 17.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ದಿನಾಂಕಃ 24.01.2010 ರಂದು ದಿನಾಂಕಃ 19.06.2014 ರ ವಿಲ್‌ನಾಮೆಯಲ್ಲಿ ತೋರಿಸಿದ ಸ್ವತ್ತನ್ನು ಸಕ್ಕರೆ ಕಾರ್ಖಾನೆಗೆ ಭೂಸ್ವಾಧೀನವಾಗಿದೆ ಎಂದರೆ ನಾವು ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕಃ 24.01.2010 ರಂದು ಭೂಸ್ವಾಧೀನವಾಗಿರುವ ಕಾರಣ ದಿನಾಂಕಃ 19.06.2014 ನನ್ನ ತಂದೆಗೆ ವಿಲ್ ನಾಮೆ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 19.06.2014ಕ್ಕೆ ಸದರಿ ಆಸ್ತಿ ನಮ್ಮ ತಂದೆಯವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 151/ಎ ರಲ್ಲಿ 7 ಸೆಂಟ್, ಸರ್ವೆ ನಂ. 157/1 ರಲ್ಲಿ 4 ಸೆಂಟ್, ಸರ್ವೆ ನಂ. 147/ಬಿ1 ರಲ್ಲಿ 1.23 ಎಕರೆ ಒಟ್ಟು 1.34 ಎಕರೆ ನನಗೆ ದಿನಾಂಕಃ 21.01.2016 ರಲ್ಲಿ ದಾನಪತ್ರದ ಮೂಲಕ ಕೊಟ್ಟಿದ್ದಾರೆ ಎನ್ನುವ ಸಮಯದಲ್ಲಿ ಭೂಸ್ವಾಧೀನ ಆಗಿಹೋಗಿದೆ ಎಂದರೆ ಸರಿಯಲ್ಲ. ಭೂಸ್ವಾಧೀನ ಮಾಡಿ ಭೂಸ್ವಾಧೀನ ಅಧಿಕಾರಿಗಳು ನೀಡಿದ ಪರಿಹಾರ ಕಡಿಮೆಯಾಗಿದೆ ಎಂದು ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಕಿದ್ದೇನೆ ಎಂದರೆ ಸರಿ. ಸದರಿ ರಿಟ್ ಅರ್ಜಿ ನಂ. 3928/2014 ದಿನಾಂಕಃ 05.08.2015 ರಂದು ತೀರ್ಮಾನವಾಗಿದೆ ಎಂದರೆ ಸರಿ. 2010 ರಲ್ಲಿ ಭೂಸ್ವಾಧೀನ ಅಧಿಕಾರಿಗಳು ನೀಡಿದ ಅವಾರ್ಡು ಮತ್ತು ರಿಟ್ ಅರ್ಜಿಯಲ್ಲಿ ಒಟ್ಟು ಎಷ್ಟು ಹೆಚ್ಚಿನ ಪರಿಹಾರ ನೀಡಿದ್ದಾರೆಂದು ಹೇಳಲಾಗುವುದಿಲ್ಲ. ದಿನಾಂಕಃ 19.06.2014 ರಲ್ಲಿ ಆದ ವಿಲ್ಲನ್ನು ನಾನು ಸಂಪೂರ್ಣ ಓದಿದ್ದೇನೆ. ಸದರಿ ವಿಲ್ ನಾಮೆಯಲ್ಲಿ ರಿಟ್ ಅರ್ಜಿ ನಂ. 3928/2014 ರಲ್ಲಿ ಆದ ಹೆಚ್ಚಿನ ಪರಿಹಾರ ಮತ್ತು ಮೂಲ ಪರಿಹಾರ ಸೇರಿಸಿ ಜಯಮ್ಮನವರಿಗೆ ಕೊಡಬಹುದು ಎಂದು ನಮೂದು ಮಾಡಿದ್ದಾರೆ. ದಿನಾಂಕಃ 19.06.2014 ರ ವಿಲ್‌ನಾಮೆ ಮಾಡಿದ ಕಾಲಕ್ಕೆ ನನ್ನ ತಂದೆಗೆ 75 –80 ವರ್ಷವಾಗಿರಬಹುದು ಎಂದರೆ ಸಾಕ್ಷಿಯು 75 ವರ್ಷವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ರಿಟ್ ಅರ್ಜಿಯನ್ನು ನನ್ನ ತಂದೆಯೇ ಹೋಗಿ ಸಲ್ಲಿಸಿರುತ್ತಾರೆ. ರಿಟ್ ಅರ್ಜಿ ಸಲ್ಲಿಸಲು ನನ್ನನಾಗಲೀ ಅಥವಾ ಬೇರೆ ಮಕ್ಕಳನ್ನಾಗಲಿ ಕರೆದಿರುವುದಿಲ್ಲ. ರಿಟ್ ಅರ್ಜಿ ನಂ. 3928/2014 ತೀರ್ಮಾನವಾದ ಕಾಲಕ್ಕೆ ನನ್ನ ತಂದೆ ಬದುಕಿದ್ದರು. ದಿನಾಂಕಃ 05.08.2015 ರಂದು ರಿಟ್ ಅರ್ಜಿ ತೀರ್ಮಾನವಾದ ನಂತರ ನನ್ನ ತಂದೆ ಯಾವುದೇ ವಿಲ್ಲನ್ನು ಬರೆದಿಲ್ಲ. ವಿಲ್ ನಾಮೆಯಲ್ಲಿ ರಿಟ್ ಅರ್ಜಿ ಆದೇಶಕ್ಕೆ ಬಾಕಿ ಇರುವ ಬಗ್ಗೆ ಬರೆದಿರುವುದಿಲ್ಲ. ರಿಟ್ ಅರ್ಜಿಯಲ್ಲಿ ಮಾಡಿದ ಪರಿಹಾರದ ಹಣವನ್ನು ಚಾಮಯ್ಯನವರ ಎಲ್ಲಾ ಮಕ್ಕಳು ಪಡೆಯಲು ಅರ್ಹರಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಕ್ಕ ಜಯಮ್ಮ ಒಬ್ಬರಿಗೆ ಹೋಗಬೇಕೆಂದು ಉತ್ತರಿಸುತ್ತಾರೆ. ಸದರಿ ವಿಲ್ ನಾಮೆಯಲ್ಲಿ ರಿಟ್ ಅರ್ಜಿ ನಂ. 3928/2014 ರಲ್ಲಿ ಆದ ಹೆಚ್ಚಿನ ಪರಿಹಾರ ಮತ್ತು ಮೂಲ ಪರಿಹಾರ ಸೇರಿಸಿ ಜಯಮ್ಮನವರಿಗೆ ಕೊಡಬಹುದು ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಚಾಮಯ್ಯರವರ ಜೀವಿತಾವಧಿಯಲ್ಲಿ ಯಾವುದೇ ದಾಖಲೆಯ ಮೂಲಕ ಪಾರಿಕತ್ತಾಗಿರುವುದಿಲ್ಲ ಮತ್ತು ಭಾಗವಾಗಿರುವುದಿಲ್ಲ ಬಾಯ್ದೆರೆಯಲ್ಲಿ ಇಂತಿಂತ ಜಮೀನನ್ನು ಉಳುಮೆ ಮಾಡಿ ಎಂದು ಹೇಳಿದ ಪ್ರಕಾರ ಮಾಡುತ್ತಿದ್ದೇವೆ ಎಂದರೆ ಸರಿ. ನಮ್ಮ ತಂದೆ ಚಾಮಯ್ಯ ಎಲ್ಲರಿಗೂ ಮೂರು ಮೂರು ಎಕರೆ ಭಾಗ ಕೊಟ್ಟಿರುತ್ತಾರೆ. ಗಂಡು ಮಕ್ಕಳಿಗೆ ಮೂರು ಮೂರು ಎಕರೆ ಕೊಟ್ಟಿರುತ್ತಾರೆ ನನ್ನ ಅಕ್ಕ ಜಯಮ್ಮ ನನ್ನ ತಂದೆಯವರನ್ನು ನೋಡಿಕೊಂಡ ಕಾರಣ ಅವರಿಗೆ ವಿಲ್ ನಾಮೆ ಮತ್ತು ದಾನಪತ್ರದ ಆಸ್ತಿಯನ್ನು ಕೊಟ್ಟಿದ್ದಾರೆ. ವಾದಿ 1 ಮತ್ತು 2 ರವರಿಗೆ ಕೊಟ್ಟ ಮೂರು ಮೂರು ಎಕರೆಯ ಸರ್ವೆ ನಂಬರು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಗೆ 1 ಎಕರೆ 77 ಸೆಂಟ್ ಜಮೀನು ಕೊಟ್ಟಿರುತ್ತಾರೆ. ರಾಜಶೇಖರ್ ರವರ ಹೆಂಡತಿಗೆ ಎರಡು ಮುಕ್ಕಾಲು ಎಕರೆ ಜಮೀನು ಕೊಟ್ಟಿರುತ್ತಾರೆ. ನನಗೆ ಕೊಟ್ಟ ಮೂರು ಎಕರೆಯ ಸರ್ವೆ ನಂ. 147 ರ ಆಜುಬಾಜು ಇರುತ್ತದೆ. ಸರ್ವೆ ನಂ. 148 ನಮ್ಮ ಕುಟುಂಬಕ್ಕೆ ಬಂದಿಲ್ಲ ಎಂದರೆ ನನಗೆ ಸರ್ವೆ ನಂಬರುಗಳ ಬಗ್ಗೆ ಹೆಚ್ಚಿಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 1.88 ಎಕರೆ ಇರುವ ಸರ್ವೆ ನಂಬರು ಆಸ್ತಿ ನಮ್ಮ ಕುಟುಂಬಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. 6 ರಿಂದ 8ನೇ ಪ್ರತಿವಾದಿಗಳಿಗೆ ನಮ್ಮ ತಂದೆ ಯಾವುದೇ ಆಸ್ತಿ ಕೊಟ್ಟಿರುವುದಿಲ್ಲ. ಸದರಿ ಪ್ರತಿವಾದಿಗಳು ನಮಗೆ ಆಸ್ತಿ ಬೇಡ ಎಂದು ಲಿಖಿತವಾಗಿ ಬರೆದುಕೊಟ್ಟಿಲ್ಲ.

ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆಯವರು ಕ್ರೈಸ್ತ ಧರ್ಮಕ್ಕೆ ಸೇರಿದವರು ಎಂದು ಬರೆದಿದೆ ಎಂದರೆ ಸರಿ. ಜಯಮ್ಮ ವಿಲ್ಲಿಗೆ ಸಂಬಂಧಪಟ್ಟಂತೆ ಪ್ರೊಬೇಟ್ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವಾರು 1954 ರಲ್ಲಿ ಮದುವೆಯಾಗಿ ಬಾಪ್ಟಿಸಂ ಕೂಡ ಪಡೆದುಕೊಂಡಿದ್ದಾರೆಂದು ನನ್ನ ಪ್ರಮಾಣ ಪತ್ರದಲ್ಲಿ ಬರೆದಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದರಿಂದ ನಾವುಗಳು ಸಹ ಕ್ರೈಸ್ತ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದೇವೆ ಎಂದು ಬರೆದಿದ್ದೇನೆ ಎಂದರೆ ಸರಿ. ನಾವು ಕ್ರೈಸ್ತ ಧರ್ಮಕ್ಕೆ ಸೇರಿದ ಕಾರಣ ನಮ್ಮ ತಂದೆಯ ಆಸ್ತಿಯಲ್ಲಿ ಎಲ್ಲರೂ ಹಕ್ಕು ಪಡೆಯುತ್ತಾರೆ ಎಂದರೆ ಸರಿಯಲ್ಲ. ವಿಲ್ ನಾಮೆ ಮತ್ತು ದಾನ ಪತ್ರದಲ್ಲಿ ನಮೂದು ಮಾಡಿದ ಆಸ್ತಿಗಳನ್ನು ಹೊರತು ಪಡಿಸಿ ಉಳಿದ ಆಸ್ತಿಗಳ ವಿವರಗಳನ್ನು ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನಾವು ಭಾರತೀಯ ಉತ್ತರಾಧಿಕಾರ ಕಾಯ್ದೆಯಲ್ಲಿ ಯಾವುದೇ ಆದೇಶ ಪಡೆದುಕೊಂಡಿಲ್ಲ. ನಾನು ಹಾಜರು ಪಡಿಸಿದ ಎಲ್ಲಾ ಕ್ರಯ ಪತ್ರಗಳ ಪ್ರತಿಫಲದ ಹಣವನ್ನು 1 ಮತ್ತು 2ನೇ ವಾದಿಗಳು ಸಂಪಾದನೆ ಮಾಡಿದ ಹಣ ಇರುತ್ತದೆ ಎಂದರೆ ಸರಿಯಲ್ಲ. 1 ಮತ್ತು 2ನೇ ವಾದಿಗಳು ಮನೆಯ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಹೆಣ್ಣುಮಕ್ಕಳ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ರೇಷ್ಮೆ ನೂಲು ತೆಗೆಯುವ ಚರಕದ ಘಟಕ ನಡೆಸುತ್ತಿದ್ದ ಸಂಪಾದನೆಯಲ್ಲಿ ತಂದೆಯ ಹೆಸರಿಗೆ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ಸದರಿ ಘಟಕ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ರೇಷ್ಮೆ ಹುಳು ಗೂಡನ್ನು ಬಿಸಿನೀರಿಗೆ ಹಾಕುವಾಗ ಅದರ ವಾಸನೆಗೆ ನಮ್ಮ ತಂದೆಗೆ ಅನಾರೋಗ್ಯ ಆಗುತ್ತಿತ್ತು ಆ ಕಾರಣ ಘಟಕದ ಪರವಾನಗಿಯನ್ನು 1ನೇ ಪ್ರತಿವಾದಿಯ ಹೆಸರಿಗೆ ಮಾಡಿದ್ದರು ಎಂದರೆ ಸರಿಯಲ್ಲ. ಈಗಲೂ ಕೂಡ 1ನೇ ವಾದಿಯ ಹೆಸರಿನಲ್ಲಿ ಪರವಾನಗಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ನಮ್ಮ ಹೆಸರುಗಳಲ್ಲಿ ಪ್ರತ್ಯೇಕವಾಗಿ ಪರವಾನಗಿ ಮಾಡಿಸಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಭೂಸ್ವಾಧೀನದಲ್ಲಿ ಆದ ಅವಾರ್ಡಿನ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿಲ್ಲ. ಭೂಸ್ವಾಧೀನದ ಪರಿಹಾರ ನನ್ನ ತಂದೆಯ ಜೀವಂತ ಕಾಲದಲ್ಲೇ ಬಂತು ಎಂದರೆ ಸರಿ. ಬಂದಂತಹ ಪರಿಹಾರವನ್ನು ನನ್ನ ಅಕ್ಕನಿಗೆ ಕೊಟ್ಟಿರುತ್ತಾರೆ. ಎಷ್ಟು ಪರಿಹಾರ ಅಕ್ಕನಿಗೆ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ನನ್ನ ಅಕ್ಕನಿಗೆ ಭೂಸ್ವಾಧೀನದ ಪರಿಹಾರ ಕೊಟ್ಟ ಎರಡು ಮೂರು ವರ್ಷಗಳ ನಂತರ ಮೃತಪಟ್ಟಿರುತ್ತಾರೆ. ಎಷ್ಟು ಪರಿಹಾರ ಬಂತೆಂದು ನಾವು ಯಾರೂ ನನ್ನ ತಂದೆಯನ್ನು ಕೇಳಿರುವುದಿಲ್ಲ. ರಿಟ್ ಅರ್ಜಿಯಲ್ಲಿ ಮಾಡಿದ ಹೆಚ್ಚಿನ ಪರಿಹಾರ ಹಣ ಬಾಕಿ ಇದೆ ಎಂದರೆ ಅಕ್ಕನಿಗೆ ಕೊಡಬೇಕೆಂದು ವಿಲ್ ನಾಮೆ ಬರೆದಿದ್ದಾರೆಂದು ಉತ್ತರಿಸುತ್ತಾರೆ. ಆ ರೀತಿ ವಿಲ್ ನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಜಯಮ್ಮ ಸೇರಿಕೊಂಡು ವಾದಿಗಳಿಗೆ ದಾವಾ ಸ್ವತ್ತು ಕೊಡಬಾರದೆಂದು ವಿಲ್ ನಾಮೆ ಮತ್ತು ದಾನಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ರಿಟ್ ಅರ್ಜಿಯಲ್ಲಿ ಮಂಜೂರಾದ ಹೆಚ್ಚಿನ ಪರಿಹಾರವನ್ನು ಪಡೆಯಲು ಚಾಮಯ್ಯರವರ ಎಲ್ಲಾ ಮಕ್ಕಳು ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.